ಓ.ಎಸ್. ನಂ. 82/2020 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 23.1.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎನ್.ಹೆಚ್.ಎಂ ವಕೀಲರಿಂದಃ**

ನಾನು ಈ ಹಿಂದೆ ಸಾಕ್ಷಿ ನುಡಿದಾಗ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ನಕ್ಷೆಯನ್ನು ತಯಾರಿಸಲಾಗಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು, ಆ ರೀತಿ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ16 ರಿಂದ ನಿಪಿ19 ರಲ್ಲಿ ಅರುಣ್‌ಗೌಡ ರವರು ಖರೀದಿ ಮಾಡಿರುವ ಆಸ್ತಿ ಮತ್ತು ಅವರು ಮೂರು ಜನರಿಗೆ ಮಾರಾಟ ಮಾಡಿರುವ ಬಗ್ಗೆ ವಿವರಣೆ ಇರುವುದಿಲ್ಲ. ನಿಪಿ16 ರಿಂದ 19 ರಲ್ಲಿ ದಾವಆಸ್ತಿಯ ಸಂಖ್ಯೆ ಮತ್ತು ಚಕ್ಕುಬಂದಿ ನಮೂದಾಗಿರುವುದಿಲ್ಲ ಎಂದರೆ ಸರಿ. ಅರುಣ್‌ಗೌಡ ರವರು ಮೂರು ಜನರಿಗೆ ಮಾರಾಟ ಮಾಡಿರುವ ಆಸ್ತಿಯ ಸಂಖ್ಯೆ, ಚಕ್ಕುಬಂದಿ ಮತ್ತು ವಿಸ್ತೀರ್ಣವನ್ನು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಆಸ್ತಿಯ ಮೇಲೆ 2014 ರಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅರುಣ್‌ಗೌಡ ರವರು ಆಸ್ತಿಯನ್ನು ಯಾವ ವರ್ಷ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅರುಣ್‌ಗೌಡ ರವರ ಹೆಸರಿಗೆ ಆಗಿರುವ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 2017-18 ರಲ್ಲಿ ಅರುಣ್‌ಗೌಡ ರವರು ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ನಾನು ಹೇಳುತ್ತಿದ್ದೇನೆ ಎಂದರೆ ಸಾಕ್ಷಿದಾರರು ಯಾವಾಗ ಖರೀದಿ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎನ್ನುವರು. ನಿಪಿ13 ರಲ್ಲಿ ಮಾರಾಟ ಮಾಡಿರುವ ಆಸ್ತಿಯ ಮೇಲೆ ಯಾವುದೇ ಸಾಲ ಇರುವುದಿಲ್ಲ ಮತ್ತು ದಾವೆ ಇರುವುದಿಲ್ಲ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಅರುಣ್‌ಗೌಡ ರವರ ಹೆಸರಿಗೆ ಆಗಿರುವ ಕ್ರಯಪತ್ರದಲ್ಲಿ ಆಸ್ತಿಯ ಮಾರಾಟವು ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶದ ಮೇಲೆ ಅವಲಂಬಿತವಾಗಿರುತ್ತದೆ ಎಂದು ಬರೆಯಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅರುಣ್‌ಗೌಡ ರವರು ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಮಾರಾಟಗಾರರಿಗೆ ಚೆಕ್ ಮೂಲಕ ಹಣ ಸಂದಾಯ ಮಾಡುತ್ತೇವೆ ಎಂದು ಕ್ರಯಪತ್ರದಲ್ಲಿ ನಮೂದು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಚೆಕ್ಕು ಅಮಾನ್ಯಗೊಂಡಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಅರುಣ್‌ಗೌಡ ರವರಿಗೆ ಮಾರಾಟ ಮಾಡಿರುವ ಸತೀಶಕುಮಾರ್ ರವರು ಆಸ್ತಿಯ ಮಾರಾಟದ ಹಣ ಸಂದಾಯ ಆಗಿರುವುದಿಲ್ಲ, ಅವರು ನೀಡಿರುವ ಚೆಕ್ ಅಮಾನ್ಯಗೊಂಡಿರುತ್ತದೆ, ಆ ಕಾರಣ ಸದರಿ ಆಸ್ತಿಯನ್ನು ಯಾರು ಖರೀದಿಸಬಾರದು ಎಂದು ದಿನಾಂಕ 30.4.2019 ರಂದು ಕನ್ನಡಪ್ರಭ ದಿನಪತ್ರಿಕೆಯಲ್ಲಿ ಪ್ರಕರಣೆ ನೀಡಿದ್ದರು ಎಂದರೆ

ನನಗೆ ಗೊತ್ತಿರುವುದಿಲ್ಲ. ಅರುಣ್‌ಗೌಡ ರವರಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳುವ ಸತೀಶಕುಮಾರ್ ರವರ ಹೆಸರಿಗೆ ಖಾತೆಯಿದ್ದ ಬಗ್ಗೆ ಕಂದಾಯ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ಕ್ರಯಪತ್ರದ ಪ್ರಕಾರ ಅರುಣ್‌ಗೌಡ ರವರ ಹೆಸರಿಗೆ ಖಾತೆ ಬದಲಾವಣೆಯಾಗಿರುವ ಬಗ್ಗೆ ಕಂದಾಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ವಾದಪತ್ರದಲ್ಲಿ ಹೇಳಿರುವಂತೆ ಅರುಣ್‌ಗೌಡ ರವರು 96*80 ಅಡಿ ಆಸ್ತಿಯನ್ನು ಖರೀದಿಸಿರುವ ಬಗ್ಗೆ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ. ಎ.ಸಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಆರ್.ಎ ನಂ.5/2010-11ರಲ್ಲಿ ಆಗಿರುವ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ನಿಪಿ4 ರಿಂದ 11 ದಾಖಲೆಗಳು 2011-12ರ ನಂತರದ ದಾಖಲೆಗಳು ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ4 ರಿಂದ 11 ದಾಖಲೆಗಳು 1974ರ ದಾನಪತ್ರದ ಆಧಾರದ ಮೇಲೆ ಖಾತೆಯಾಗಿರುತ್ತದೆ ಎಂದು 2011 ರ ನಂತರ ಸೃಷ್ಟಿಸಿರುವ ದಾಖಲೆ ಎಂದರೆ ಸಾಕ್ಷಿದಾರರು ನಾನು ಸೃಷ್ಟಿ ಮಾಡಿರುವುದಿಲ್ಲ ಎನ್ನುವರು. ಸದರಿ ಅರುಣ್‌ಗೌಡ ರವರಿಗೆ ಅಸ್ತಿಯ ಮೇಲೆ ಯಾವುದೇ ಹಕ್ಕು ಇರದಿದ್ದರಿಂದ ಅವರು ಬೇರೆಯವರಿಗೆ ಆಸ್ತಿ ಮಾರಾಟ ಮಾಡುವ ಹಕ್ಕು ಮತ್ತು ಮಾಲೀಕತ್ವ ಇರಲಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಯ ಮೇಲೆ ಪ್ರಕರಣ ಬಾಕಿ ಇದ್ದ ವಿಚಾರ ನನಗೆ ಗೊತ್ತಿದ್ದು ನಾನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ರಿಸ್ಕ ಮೇಲೆ ಖರೀದಿ ಮಾಡಿರುವುದರಿಂದ ದಾವಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸತೀಶಕುಮಾರ್ ರವರು ಅರುಣ್‌ಗೌಡರ ವಿರುದ್ಧ ಚೆಕ್ ಬೌನ್ಸ ಕೇಸು ದಾಖಲಿಸಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

ಈ ಹಂತದಲ್ಲಿ ಮದ್ಯಾಹ್ನ 3 ಗಂಟೆಗೆ ಮುಂದುವರೆದ ಪಾಟೀ ಸವಾಲು ಮಾಡುವುದಾಗಿ ತಿಳಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.